ಶ್ರೀ ಬಿ. ರಮಾನಾಥ ರೈ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಟ್ರೀ ಪಾರ್ಕ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಪ್ರಾಥಮಿಕ ಪರಿಶೀಲನೆ ಹಂತದಲ್ಲಿರುತ್ತದೆ.

ಬೃಹತ್ ಕಂಪನಿಗಳಿಂದ ಪರಿಸರ ಮಾಲಿನ್ಯ

2104(2741); ಶ್ರೀ ಮೋಹಿಯುದ್ದಿನ್ ಬಾವಾ ಬಿ.ಎ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಬೃಹತ್ ಕಂಪನಿಗಳಿಂದ ಪರಿಸರ ಮಾಲಿನ್ಯ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪರಿಸರ ಮಾಲಿನ್ಯ ನಿರ್ಮೂಲನಕ್ಕೆ ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಇ) ಪರಸರ ಮಾಲಿನ್ಯದ ವಿರುದ್ಧ ಜಾಗೃತಿ ಮೂಡಿಸಲು ಯಾವ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;

ಈ) ಪರಿಸರ ಮಾಲಿನ್ಯದ ವಿರುದ್ಧ ಜಾಗೃತಿ ಮೂಡಿಸಲು ನಿಗದಿಪಡಿಸಿರುವ ಅನುದಾನವೆಷ್ಟು? (ವಿವರ ನೀಡುವುದು)

ಶ್ರೀ ಬಿ. ರಮಾನಾಥ ರೈ (ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)

ಅ) ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ) ಉದ್ದಿಮೆಗಳಿಂದ ಉತ್ಪತ್ತಿಯಾಗುವ ಕಲ್ಮಶ ನೀರನ್ನು ಶುದ್ಧೀಕರಿಸಲು ಸಂಬಂಧಪಟ್ಟ ಉದ್ದಿಮೆಗಳು ಶುದ್ಧೀಕರಣ ಘಟಕಗಳನ್ನು ಅಳವಡಿಸಿದ್ದು ಸಂಸ್ಕರಿಸಿದ ಕಲ್ಮಶ ನೀರನ್ನು ಮರುಬಳಕೆ ಮಾಡಲಾಗುತ್ತಿದೆ. ಸಂಸ್ಕರಿಸಿದ ಕಲ್ಮಶ ನೀರಿನ ಮಾದರಿಗಳನ್ನು ಕಾಲಾನುಕಾಲಕ್ಕೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ವಿಶ್ಲೇಷಿಸಲಾಗುತ್ತಿದೆ ಹಾಗೂ ಅವುಗಳು ಬಹುತೇಕ ಮಂಡಳಿ ನಿಗದಿಪಡಿಸಿದ ಮಾಪನಕ್ಕೆ ಸರಿಹೊಂದಿರುತ್ತವೆ.

ಉದ್ದಿಮೆಗಳಲ್ಲಿರುವ ವಾಯು ಮಾಲಿನ್ಯ ಮೂಲಗಳಿಗೆ, ನಿಗದಿ ಪಡಿಸಿರುವ ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಹಾಗೂ ಹೊಗೆ ಕೊಳವೆಗಳನ್ನು ಅಳವಡಿಸಲಾಗಿದೆ. ಬೃಹತ್ ಉದ್ಯಮಗಳು, ಆನ್ ಲೈನ್ ನಿರಂತರ ಪರಿವೇಷ್ಟಕ ವಾಯು ಗುಣಮಟ್ಟ ಮಾಪನ ಮಾಡುವ ಉಪಕರಣಗಳನ್ನು ಅಳವಡಿಸಿರುತ್ತಾರೆ ಹಾಗೂ ಹೊಗೆ ಕೊಳವೆಗಳಿಗೆ ಆನ್ ಲೈನ್ ನಿರಂತರ ಮಾಪನ ವ್ಯವಸ್ಥೆಗಳನ್ನು ಹೊಂದಿರುತ್ತಾರೆ.

ಉದ್ದಿಮೆಗಳಿಂದ ಉತ್ಪತ್ತಿಯಾಗುವ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು TSDF (Treatment Storage and Disposal Facility) ನಲ್ಲಿ ವಿಲೇವಾರಿ ಮಾಡಲಾಗುವುದು ಹಾಗೂ ಸಿಮೆಂಟ್ ಕಾರ್ಖಾನೆಗಳಲ್ಲಿಯೂ ಸಹ ದಹಿಸಿ ವಿಲೇವಾರಿ ಮಾಡಲಾಗುತ್ತಿದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಯನದ ಪ್ರಕಾರ ಮಂಗಳೂರಿನ ಕೈಗಾರಿಕ ಪ್ರದೇಶವನ್ನು Critically Polluted Area ಎಂದು 2010ರಲ್ಲಿ ಗುರುತಿಸಿ, ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯು ಈ ಪ್ರದೇಶದಲ್ಲಿ ಕೈಗಾರಿಕಾ ಅಭಿವೃದ್ಧಿ ಚಟುವಟಿಕೆಗಳಿಗೆ ತಾತ್ಕಾಲಿಕ ನಿಬಂಧನೆಯನ್ನು ವಿಧಿಸಿತ್ತು. ನಂತರ Critically Polluted Area ಎಂದು ಗುರುತಿಸಲಾದ ಪ್ರದೇಶದಲ್ಲಿನ ಪರಿಸರ ಗುಣಮಟ್ಟವನ್ನು ಅಭಿವೃದ್ಧಿಗೊಳಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ವತಿಯಿಂದ ಸಿದ್ಧಪಡಿಸಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಕಾರ್ಯಯೋಜನೆಗೆ ಅನುಮತಿಯನ್ನು ಪಡೆದು ಅನುಷ್ಠಾನಗೊಳಿಸಲಾಗುತ್ತಿದೆ. ಕಾರ್ಯಯೋಜನೆ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಸ್ಥಳೀಯ ಪ್ರದೇಶ ಸಮಿತಿಯನ್ನು ರಚಿಸಿ ಕಾಲಾನುಕಾಲಕ್ಕೆ ಕಾರ್ಯಯೋಜನೆ ಅನುಷ್ಠಾನವನ್ನು ಪರಾಮರ್ಶಿಸಲಾಗುತ್ತಿದೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಪ್ರದೇಶದಲ್ಲಿನ ಪರಿಸರ ಗುಣಮಟ್ಟ ಉತ್ತಮಗೊಳಿಸುವ ನಿಟ್ಟಿನಲ್ಲಿ

ಕೈಗೊಳ್ಳಲಾದ ಈ ಎಲ್ಲಾ ಕ್ರಮಗಳನ್ನು ಪರಿಗಣಿಸಿ ಕೇಂದ್ರ ಪರಿಸರ ಮತ್ತು ಅರಣ್ಯ ಇಲಾಖೆಯು ಈ ಹಿಂದೆ ವಿಧಿಸಿದ್ದ ನಿಬಂಧನೆಯನ್ನು ಮೇ 2011 ರಲ್ಲಿ ಹಿಂಪಡೆದುಕೊಂಡಿರುತ್ತದೆ. ಅಲ್ಲದೇ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಸಹ ನಿಯಮಿತವಾಗಿ ಸದರಿ ಪ್ರದೇಶದ ಪರಿಸರ ಗುಣಮಟ್ಟವನ್ನು ಮಾಪನ ಮಾಡುತ್ತಿದೆ.

ಇ) ವಿವರವನ್ನು ಅನುಬಂಧ – 1ರಲ್ಲಿ ನೀಡಲಾಗಿದೆ.

ಈ) ಜಾಗೃತಿ ಮೂಡಿಸಲು ₹ 1,80,000ಗಳನ್ನು ನಿಗದಿಪಡಿಸಲಾಗಿದೆ.

ಅನುಬಂಧ-01

TOTAL ENVIRONMENTAL PROGRAMMES CONDUCTED AT REGIONAL OFFICE, MANGALORE DURING 2013-14 (as on 31.12.2013)				
SL. No.	Date	Place	Associating Agency	Programmee
1	08.04.2013	A.J.Medical College, Mangalore	AJ Hospital,Mangalore	Bio-Medical
2	03.06.2013	Sequent Scientific Ltd	Sequent Scientific Ltd	Food Habits &Environment
3	05.06.2013	Navodaya School, Mudipu,Mangalore	KSPCB,MSEZ, & HLL	World Environment Day
4	05.06.2013	NMPT,Mangalore	NMPT,Mangalore	World Environment Day
5	05.06.2013	MRPL, Kuthethoor, Mangalore	MRPL	World Environment Day
6	05.06.2013	Hindusthan Unilever, Bolar, Mangalore	HUL	World Environment Day
7	05.06.2013	College of Fisheries,Mangalore	College of Fisheries,Mangalore	World Environment Day
8	20.06.2013	Adani-Wilmar Industries	Adani-Wilmar Industries	Industries &Environment
9	24.06.2013	MCF, Panambur, Mangalore	MCF, Panambur, Mangalore	Business &Environment
10	26.06.2013	Government Higher Primary School,Surathkal, Mangalore	BASF India Limited	World Environment Day
11	28.06.2013	Lady Hill Victoria High School Mangalore	KSPCB,MSEZ,	Painting Competition for School children for World Env.Day
12	28.06.2013	Canara High School, Urva,Mangalore	KSPCB,MSEZ,Education Dept	Elocution Competition for School children for World Env.Day
13	02.07.2013	MCF, Panambur, Mangalore	MCF, Mangalore	World Environment Day
14	04.07.13	SDM Collge of Business Management,Mangalore	SDM Collge of Business Management,Mangalore	Food & Environment
15	11.07.2013	Burtand Russel School, Baikmapady,Mangalore	Burtand Russel School, Baikmapady,Mangalore	Eco-Club Inaguaration
16	03.08.2013	Town Hall, Mangalore	KSPCB,Forest Dept, Env.Dept	Lakshvrikshotsava andWorld Env.Day competetion Prize distribution

17	16.09.13	Alvas College Moodabdri	KSPCB,Alvas College	Deabte Competion for college students & World Ozone Day Celebration
18	19.09.13	Govt.P.U.College,Chelyar , Mangalore	MRPL,KSPCB	Environmental Awareness & Fire & Saftey Awareness
19	19.09.13	Orchid Apartment, Balmatta,Mangalore	MCC,KSPCB,	MSW seggregation/ Distrution of dust bins for Dry & Wet MSW
20	22.09.13	Panambur Beach,	Coast guard and PCB	Beach Cleaning
21	23.09.13	Govt. D.Ed. College for women,Balmatta	MCC/KSPCB/Nisarga Foundation Charitable trust	Awareness on Vermi Compost and distribution of Vermi Compost Bins
22	24.09.13	Veterinary Hospital, Mangalore	Piggery units Association	Awareness on waste generated from piggery units
23	26.09.13	IOC L, Mangalore	IOC, Inspector of factories and Boilers, KSPCB	Fire & Safety awareness (Mock drill)
24	26.09.13	BPCL, Mangalore	BPCL, Inspector of factories and Boilers, KSPCB	Fire & Safety awareness (Mock drill)
25	27.09.13	SDM Collge of Business Management ,Mangalore	SDM Collge of Business Management,Mangalore	Environmental Awareness
26	04.12.2013	HPCL, Bala		Chemical Disaster Prevention day
27	05.12.2013	Regional Office Hall, Mangalore	Industries MCC, NGO, press	National Recycling Week-MSW
28	07.12.2013	Canara High School URVA, Mangalore	MCC, teachers students	National Recycling Week-MSW
29	17.12.2013	MCF, Panambur, Mangalore		Chemical Disaster Prevention day
30	23.12.2013	Ocean Pearl Hotel, Mangalore	Industries MCC, NGO, ULB's, Public	National Recycling Week-Plastic

(ಜೆ.ಹೆಚ್. ಅನಸೂಯಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ,
(ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.